ಪೊಡವಿಯನು ಪೊಡೆಯೊಳಡಗಿಸಿದವನು. ತನ್ನ ಮೂರ್
ಅಡಿಯಿಂದ ಮೂಜಗವನಳೆದವನು. ಅಂದಾಕ
ಳಂಜಿಕೆಯ ಕಳೆಯಲ್ಕೆ ಕುಂದವೆತ್ತಿದವನ್. ಆ
[1] ಬಲ್ಗೋಂಟೆಯುರುಮೆಯನು ಮುರಿದ ಕಟ್ಟಾಳು. (ii)

ಎಳ್ಳೆಣಿಸದಿರದೆಂದುಮ್ ಇಳಿದರೆಂದು. ಏನುಮಂ
ಕೊಳ್ಳದಿರು ಕೊಳ್ಳದರ ಕೈ ಮೇಲದಾಗೆ. — ಮನ
ಸುಡುವೊಡಂ ಕನಲದಿರು ಕಿರುಕುಲದೆ ಪುಟ್ಟಿದರೊಳ್.
ಆಡದಿರು ಮೇಣಾಡತಗದುವನು ದುಡುಕಿ. ॥ ೧ ॥

ಹರೆಯ ದನಿ ಪಡೆ ಬಾಳದಶುಣಮೃಗ[2]. ತಮ್ಮ ಮನ
ಕೊರೆಪಡಲು ಬಾಳರಾ ಹಿರಿಯರ್. ಇಡಿವಡವಿಯಲಿ
ಬಿದಿರ್ ಅಕ್ಕಿ ಮೂಡಲಳಿವುದು. ತನಗೆ ತಗದ ನುಡಿ
ಯೊದಗೆ ಸಂಪನ್ನ ತಾನ್ ಬಾಳನಾ ಬಳಿಕ. ॥ ೨ ॥

ತೊಳೆದು ಮಣಿಗುಣವನರಿವರು. ಮುನ್ನ ಜೀನಿಟ್ಟು
ಮೇಲೇರಿ ಕುದುರೆಗುಣವರಿಯುವರು. ಮಾಸಳಿಯೆ
ಸುಟ್ಟರಿವರಾ ಹೊನ್ನಿನೊಳ್ಗುಣವ ಕಾಣ್ಬವರು.
ಕೆಟ್ಟರಿವರಂತು ಕೆಳೆಯರು ತರುವ ಸುಖವ. ॥ ೩ ॥

ಕಳ್ಳಿಯೊಡಲೊಳಗಗಿಲು ಹುಟ್ಟುವುದು. ಮೃಗವೊಡಲೊಳ್
ಒಳ್ಳೆ ಕಸ್ತೂರಿ ಹುಟ್ಟುವುದು. ಪೆರ್ಗಡಲೊಳಗೆ
ಬಲ್‌ಬೆಲೆಯ ಮುತ್ತುಗಳು ಹುಟ್ಟುವುವು. ಯಾರರಿವರ್
ಒಳ್ಳೆಯವ ಹುಟ್ಟುವಾ ಕುಲದ ನೆಲೆಯ? ॥ ೪ ॥

ಕಲ್ಲಿನಲಿ ಹುಟ್ಟುವುದು ಕದಿರುಮಣಿ. ಕಾದಲೆಯ
ಸೊಲ್ಲಿನಲಿ ಹುಟ್ಟುವುದು ಮಿಗಿಲು ಮುದ. — ಮೆಲುಪಾದ
ಕರುಣೆಯಲಿ ಹುಟ್ಟುವುದು ಅರದ ಸಿರಿ. ಎಲ್ಲವೂ
ಪುರುಳಿನಲಿ ಹುಟ್ಟಿಬಿಡುವುದು ತಪ್ಪದೆ. ॥ ೫ ॥

ಸಿರಿಯಹುದು ಕರೆಯಿಲ್ಲದಾಚರಣೆ. ಪಿರಿಯದೊಂ
ದರನಹುದು ಸರಿದಾರಿಯಲಿ ನಡೆಯೆ. — ಒರ್ವನನು
ಕೆಳೆಗೊಂಡು ಕಡೆಗಣಿಸೆ ಕೊಲೆಯಹುದು. ಹೊಲೆಯಹುದು
ತಲೆಯ ತಗ್ಗಿಸಿ ನಡೆವುದಾಗದರ ಮುಂದೆ. ॥ ೬ ॥

ಕಳ್ಪವೆಂಬರಿಗಿಲ್ಲ ನಿದ್ದೆ. ಕಾದಲೆಯಲ್ಲಿ
ಮನಮನೊಲ್ಪಿಟ್ಟರಿಗಮಿಲ್ಲ ನಿದ್ದೆ. — ಒಳ್ಳಿದಹ
ಪುರುಳ ಕೂಡಿಸುವರಿಗೆ ನಿದ್ದೆಯಿಲ್ಲಾ ಪುರುಳ
ಕಾಯ್ದುಕೊಂಡಿರುವರಿಗಮಿಲ್ಲ ನಿದ್ದೆ. ॥ ೭ ॥

ಮನೆಗೆ ಹಿರಿಬೆಳಕು ನಲ್ಮಡದಿಯರು. ಮಡದಿಯರಿ
ಗೆಣಿಸೆ ಗುಣ ತುಂಬಿರುವ ನಲ್ಮಕ್ಕಳು.– ಮನಕಿನಿಯ
ಕಾದಲಿನ ಮಕ್ಕಳಿಗೆ ಕಲ್ವಿಯೇ. ಕಲ್ವಿಗಂ
ಓದಿನಲಿ ಮಿಗೆ ಪೊಗಳು ತುಂಬಿದಾರ್ಪಿವು. ॥ ೧೦೩ ॥

ಇನಿನುಡಿಗಳಿಂದ ಕೆಳೆಯಪ್ಪುದಿನಿಮೆಯನುಳಿದ .
ಕಡುನುಡಿಗಳಿಂದ ಮನ ಕದಡಪ್ಪುದು.– ಮೆಲ್ನುಡಿಯ
ನಾಲಗೆಯಿನಪ್ಪುದರುಳ್ಮನ. ಅರುಳ್ಮನದಿಂದ
ಬೀಳಿರದ ಬಿಡುಗಡೆಯೆ ಬಹುದು. ॥ ೧೦೪ ॥

---

ಈ ಅನುವಾದವನ್ನು ಮೂಲಗ್ರಂಥದೊಡನೆ ಹೋಲಿಸಿ ತಿದ್ದಿ ನೆರವಾದ ನನ್ನ ಕೆಳೆಯರು ಶ್ರೀಮಾನ್ ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ., ಅವರಿಗೂ, ಇದನ್ನು ಮೊದಲು 'ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ'ಯಲ್ಲಿ ಪ್ರಕಟಿಸಿ, ಈಗ ಬೇರೆಯಾಗಿ ಅಚ್ಚು ಮಾಡುವುದಕ್ಕೆ ಅನುಮತಿಕೊಟ್ಟ ಆ ಪತ್ರಿಕೆಯ ಸಂಪಾದಕರಿಗೂ ನನ್ನ ವಂದನೆಗಳು.

---

1 ಗೆಲ್ಲುವುದಕ್ಕೆ ಶಕ್ಯವಲ್ಲವೆಂದು ಪ್ರಸಿದ್ಧವಾದ ಬಾಣಾಸುರನ ಕೋಟೆಯನ್ನು ಗೆದ್ದ ವೀರ.

2 ಈ ಪ್ರಾಣಿ ಕರ್ಕಶಧ್ವನಿ ಕಿವಿಗೆ ಬಿದ್ದರೆ ಕೂಡಲೆ ಸಾಯುವುದೆಂದು ನಂಬುತ್ತಾರೆ.

# ಅರ್ಥಕೋಶ

(ಅಂಕಿ ಪದ್ಯವನ್ನು ಸೂಚಿಸುತ್ತದೆ)

ಅಡಗು ೨೬ ಮಾಂಸ
ಅಡೆ ೬೭ ಪಡೆ
ಅನ್ನರು ೫೬ ಅಂಥವರು
ಅರ ೫ ಧರ್ಮ
ಅರನಲಿವು ೩೫ ಧರ್ಮದಿಂದ ಆಗುವ ಸಂತೋಷ
ಅರನಿರಿ ೫೧ ಧರ್ಮಮಾರ್ಗ
ಅರಿದು ೪೯ ಅಸಾಧ್ಯ
ಅರುಮೆ (ii) ಅಸಾಧ್ಯತ್ವ
ಅರುಳು ೧೦೧ ಕೃಪೆ, ಕರುಣೆ
ಆರ್ತಿ ೩೨ ಪ್ರೀತಿ
ಆವು ೬೧ ಹಸು
ಇಚ್ಚೊಡರು ೫೮ ಎರಡು ಬೆಳಕುಗಳು : ಸೂರ್ಯ, ಚಂದ್ರ
ಇಲ್ಲಮೆ ೩೦ ಇಲ್ಲದಿರುವುದು, ಅಭಾವ
ಇಳಿದರು ೧ ಸುಲಭರು
ಉಣವು ೫೦ ಉಣ್ಣುವ ಪದಾರ್ಥ, ಆಹಾರ
ಉಸಿರಿ ೭೭ ಪ್ರಾಣಿ, ಜೀವಿ
ಉಳ್ಳನಿಂದ ೨೪ ಒಡೆಯನಿಂದ
ಎಳ್ಳಣಿಸು ೧ ಅಲ್ಪವಾಗಿ ಕಾಣು
ಐದರಿಂ ೪೪ ಐದು ಇಂದ್ರಿಯಗಳಿಂದ
ಒಗೆ ೧೪ ಹುಟ್ಟು
ಒಲವಿಲಿ ೯೧ ಒಲವಿಲ್ಲದವಳು
ಒಳ್ನೀರು ೩೪ ಅನ್ನಸೇರಿದ ನೀರು (ವ್ಯಾಖ್ಯಾನ)
ಕದಿರು (i) ಕಿರಣ, ಕಾಂತಿ
ಕಲ್ವಿ ೩೦ ಕಲಿತದ್ದು, ವಿದ್ಯೆ
ಕಲ್ಲಮೆ ೮೧ ಕಲಿಯದಿರುವುದು
ಕಳಿರು ೧೦ ಗಂಡಾನೆ (ಹೆಣ್ಣಾನೆ = ಪಿಡಿ)
ಕಳ್ಳುಣಿ ೯೫ ಹೆಂಡ ಕುಡಿಯುವವನು
ಕಾದಲ್ ೬೩ ಒಲವು, ಪ್ರೀತಿ
ಕುಂದ (ii) ಬೆಟ್ಟ
ಕುರುಗು ೩೬ ಒಂದು ಜಾತಿಯ ಮರ
ತಗುಮೆ ೪೩ ತಕ್ಕತನ, ಯೋಗ್ಯತೆ
ತವು ೭೭ ಹಾಳಾಗು, ನಾಶವಾಗು
ತಳರು ೭೩ ನಡುಗು, ಅದಿರು, ತತ್ತರಿಸು
ನಣ್ಪು ೧೭ ನಂಟು
ನನೆ ೪೮ ಹೂವು
ನರುಗಂಪು ೪೮ ಸುವಾಸನೆ, ಪರಿಮಳ
ನಲ್ ೧೧೧ ಒಳ್ಳೆಯ
ನಿರಿ ೫ ದಾರಿ, ಮಾರ್ಗ
ನಿರಿಸು ೨೮ ನೆಲೆಯಾಗಿ ನಿಲ್ಲಿಸು, ಸ್ಥಾಪಿಸು
ನೆಯ್ಯ್ ೬೧ ಜಿಡ್ಡು, ತುಪ್ಪ
ನೆರತೆ ೬೨ ತುಂಬು, ಸಮೃದ್ಧಿ
ನೇಸರ್ (i) ಸೂರ್ಯ
ನುಣ್ಣಿದುವು ೫೫ ಸೂಕ್ಷ್ಮವಾದುವು
ಪಟ್ಟಿನ ೮೪ ರೇವುಪಟ್ಟಣ
ಪಡಪು ೩೦ ಪಡೆದುಕೊಂಡದ್ದು, ಭಾಗ್ಯ
ಪರದ ೮೪ ಹರದ, ಸರಕು
ಪಳಮೆನಡೆ ೫೨ ಹಳೆಗಾಲದಿಂದ ಬಂದ ಪರಂಪರೆ
ಪಾಡುಳ್ಳ ೬೩ ಸೊಗಸುಳ್ಳ
ಪುದುವಾಳು ೨೩ ಕೂಡಿ ಬಾಳು
ಪುರುಳು ೫ ಹಣ, ಅರ್ಥ. ೧೯ ಅಭಿಪ್ರಾಯ, ೬೨ ವಸ್ತು, ಪದಾರ್ಥ
ಪುಲ್ಲರಿವು ೨೮ ಹುಲ್ಲಿನಂತೆ ಅಲ್ಪವಾದ ತಿಳಿವಳಿಕೆ
ಪೆರೆ (i) ಚಂದ್ರ
ಬಂಡುಣಿ ೪೮ ಜೇನು, ದುಂಬಿ
ಬರಿಯರು ೬೮ ಏನೂ ಇಲ್ಲದವರು, ದರಿದ್ರರು
ಬಾನು ೫೮ ಆಕಾಶ
ಬಾಂಬನಿ ೨೭ ಬಾನಿನ ಹನಿ: ಮಳೆಹನಿ
ಬಿರ್ದು ೪೫ ಅತಿಥಿ
ಬೆಳ್ಳರಿವಿನವರು ೭೨ ತಿಳಿವಳಿಕೆ ಇಲ್ಲದವರು
ಬೇಳ್ವಿ ೫೨ ಯಜ್ಞ
ಮಡ ೪೨ ಕಾಲುವೆ
ಮನೆಬಾಳ್ಕೆ ೪೭ ಗೃಹಸ್ಥ ಜೀವನ, ಗೃಹಸ್ಥ ಧರ್ಮ
ಮಾಯಿ (i) ಮಾಯೆಯೊಡೆಯ, ವಿಷ್ಣು
ಮಾರು ೪೪ ಬೇರೆಯಾಗು, ಮಾರ್ಪಡು
ಮುತ್ತವನು ೬೪ ಮುದುಕನಾದವನು
ಮುನ್ನೀರು (i) ಕಡಲು, ಸಮುದ್ರ
ಮೆಯ್ ೭೩ ಹುಟ್ಟು, ಜನ್ಮ

175—39 ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯರವರು ಮುದ್ರಿಸಿರುವರು